


ತಾಯಿ: ಯಾವುದೋ ಪುಸ್ತಕ ಅಷ್ಟು ತಲ್ಲೀನನಾಗಿ ಓದುತ್ತಾ ಇದೀಯಾ?

ಮಗ: 'ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳೆಸುವುದು ಹೇಗೆ?' ಎಂಬ ಪುಸ್ತಕ.

ತಾಯಿ: ಅದನ್ನು ನಾನು ಓದಬೇಕು. ಎಲ್ಲಾ ಬಿಟ್ಟು ನೀನು ಯಾಕೆ ಓದುತ್ತಾ ಇದೀಯಾ?

ಮಗ: ನೀನು ನನ್ನನ್ನು ಸರಿಯಾಗಿ ಬೆಳೆಸುತ್ತಾ ಇದೀಯೋ ಇಲ್ಲವೋ ಅಂತ ಓದಿ ತಿಳಿದುಕೊಳ್ತಾ ಇದೀನಿ!

★★★

ಪತ್ರಕರ್ತ: ನಿಮ್ಮ ಹೊಸ ನಾಟಕದ ಬಗ್ಗೆ ಪ್ರೇಕ್ಷಕರ ಪ್ರತಿಕ್ರಿಯೆ ಹೇಗಿದೆ?

ನಾಟಕಕಾರ: ಕೆಲವರಿಗೆ ಹಿಡಿಸಿದೆ. ಇನ್ನು ಕೆಲವರಿಗೆ ಹಿಡಿಸಿಲ್ಲ.

ಪತ್ರಕರ್ತ: ಏನು ಹಾಗಂದರೆ?

ನಾಟಕಕಾರ: ನಮಗೆಲ್ಲ ಹಿಡಿಸಿದೆ. ಆದರೆ ಪ್ರೇಕ್ಷಕರಿಗೆ ಹಿಡಿಸಲಿಲ್ಲ.

★★★

ಪೊಲೀಸ್: ಸ್ಕೂಟರಿನ ಮೇಲೆ ನಾಯಿ ಕೂಡಿಸಿಕೊಂಡು ಹೋಗುತ್ತಿದ್ದೀರಲ್ಲ. ಅದಕ್ಕೆ ಲೈಸೆನ್ಸ್ ಇದೆಯಾ?

ಗುಂಡ: ಇಲ್ಲಾ ಸಾರ್ ಅದಕ್ಕೆ ಲೈಸೆನ್ಸ್ ಮಾಡಿಸಿಲ್ಲ.

ಪೊಲೀಸ್: ಯಾಕೆ ಮಾಡಿಸಿಲ್ಲ?

ಗುಂಡ: ಯಾಕೆಂದರೆ ನಾಯಿಗೆ ಸ್ಕೂಟರ್ ಓಡಿಸಲು ಬರೋದಿಲ್ಲ.

★★★

ಗುಂಡ: (ಆರೋಗ್ಯ ಇಲಾಖೆಗೆ ಫೋನಾಯಿಸಿ) ನಮ್ಮ ಮನೆಯ ಮುಂದೆ ಒಂದು ಕತ್ತೆ ಸತ್ತುಬಿದ್ದಿದೆ. ದಯವಿಟ್ಟು ಅದನ್ನು ತೆಗೆಸಬೇಕು.

ನೌಕರ: ಸತ್ತವರನ್ನು ವಿಚಾರಿಸಿಕೊಳ್ಳುವವರೇ ನೀವೂಂತ ಅಂದುಕೊಂಡಿದ್ದೆ.

ಗುಂಡ: ಸತ್ತವರನ್ನು ವಿಚಾರಿಸಿಕೊಳ್ಳುವ ಮೊದಲು ಅದರ ಸಂಬಂಧಿಕರಿಗೆ ತಿಳಿಸುವುದು ಸೌಜನ್ಯ. ಅದಕ್ಕೆ ನಿಮಗೆ ತಿಳಿಸಿದೆ.

★★★

ಹೆಂಡತಿ: (ಅರ್ಧ ರಾತ್ರಿಯಲ್ಲಿ) ರೀ ಯಾರೋ ಕಳ್ಳ ನಮ್ಮ ಮನೆಯ ಅಡುಗೆ ಮನೆಗೆ ನುಗ್ಗಿ ನಾನು ಮಾಡಿದ ಅಡುಗೆಯನ್ನೆಲ್ಲಾ ತಿಂತಿದಾನೆ.

ಗುಂಡ: ಅಯ್ಯೋ ಸುಮ್ಮನಿರೇ! ತಿಂದರೆ ತಿನ್ನಲಿ. ಸದ್ಯ ಅವನು ಇಲ್ಲೇ ಹಾಸಿಗೆ ಹಿಡೀದಿದ್ರೆ ಸಾಕು!

★★★

ಗುಂಡ: ನಮ್ಮ ಪಕ್ಕದ ಮನೆಯಲ್ಲಿರುವ ಮಾಲೀಕ ಬಾಡಿಗೆ ಕೇಳೋಕೆ ಬಂದಿದ್ದಾಗ ನಿಮ್ಮ ನಾಯಿ ಅವರನ್ನು ಕಚ್ಚಿಬಿಟ್ಟಿತಂತೆ!

ಬಾಡಿಗೆದಾರ: ಅದಕ್ಕೇನು ಮಾಡಬೇಕು? ಏನಾದರೂ ಪರಿಹಾರ ಕೊಡೀಂತ ಕೇಳೋಕೆ ಬಂದಿದೀರಾ?

ಗುಂಡ: ಇಲ್ಲ! ನಿಮ್ಮ ನಾಯೀನ ಕೊಂಡುಕೊಳ್ಳೋಕೆ ಬಂದಿದೀನಿ.

★★★

ಗೆಳೆಯ: ಹತ್ತು ಸಾವಿರ ರೂಪಾಯಿ ಇದ್ದ ನಿನ್ನ ಪರ್ಸ್ ಕಾಣೆಯಾಗಿದೇಂತ ಹೇಳ್ತಾ ಇದ್ದೆಯಲ್ಲ ಸಿಕ್ಕಿತಾ?

ಗುಂಡ: ನನಗೆ ಸಿಗಲಿಲ್ಲ! ಆದರೆ ನನ್ನ ತಮ್ಮನಿಗೆ ಸಿಕ್ಕಿದೆ.

ಗೆಳೆಯ: ಹಾಗಾದರೆ ಇನ್ನೂ ಒಳ್ಳೆಯದೇ ಆಯಿತಲ್ಲ?

ಗುಂಡ: ಒಳ್ಳೆಯದೇನು ಆಯಿತು? ಈಗ ನನ್ನ ತಮ್ಮ ಕಾಣೆಯಾಗಿದ್ದಾನೆ.

★★★

ಮಗ: ಏನಪ್ಪಾ ನಿನಗೆ ಲಾಟರಿಯಲ್ಲಿ 10 ಲಕ್ಷ ಬಂದಿದೆಯಂತೆ ಹೌದಾ?

ತಂದೆ: ಹೌದು ಕಣೋ! ನನಗಂತೂ ಸಿಕ್ಕಾಪಟ್ಟೆ ಸಂತೋಷ ಆಗಿದೆ.

ಮಗ: ಅಷ್ಟೊಂದು ಸಂತೋಷ ಪಡಬೇಡ.

ತಂದೆ: ಯಾಕೋ?

ಮಗ: ನೀನು ಜೋಪಾನವಾಗಿ ಎತ್ತಿಡು ಅಂತ ಅಮ್ಮನ ಕೈಯಲ್ಲಿ ಕೊಟ್ಟಿದ್ದೆಯಲ್ಲ, ಆ ಲಾಟರಿ ಟಿಕೆಟ್ಟು ಕಳೆದುಹೋಗಿದೆ.

★★★

ರಾಧಾ: ಏನೇ ಸುಮಾ ಎಷ್ಟು ವರ್ಷ ಆಯ್ತು ನಿನ್ನ ನೋಡಿ! ಈಗ ನಿನ್ನ ವಯಸ್ಸೆಷ್ಟು?

ಸುಮಾ: ಹದಿನೆಂಟು! ಅಂದಹಾಗೆ ನಿನ್ನದು?

ರಾಧಾ: ಏನು ಇನ್ನೂ ಹದಿನೆಂಟು ಅಂದೆಯಾ? ಆ ಲೆಕ್ಕಾಚಾರದಲ್ಲಿ ನೋಡಿದರೆ ನಾನಿನ್ನೂ ಹುಟ್ಟೇ ಇಲ್ಲ.

**(ಸಂಗ್ರಹ) ಎಂ.ಕೆ.ಮಂಜುನಾಥ್, ಬೆಂಗಳೂರು**




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

